ಆಯಾಸದ ಛಾಯೆ ಹರಡಿಕೊಂಡಿತ್ತು. ಕುಳಿತುಕೊಳ್ಳಲು ಮುಂದಿನ ಆಸನವನ್ನು ತೋರಿ, ''ಹೇಳಿ, ಎಲ್ಲಿಂದ ಬರುತ್ತಿದ್ದೀರಿ?'' ವಿಚಾರಿಸಿಕೊಂಡಿದ್ದೆ. ''ನಿನ್ನೆ ರಾತ್ರಿ ಹತ್ತೂವರೆ ಗಂಟೆಗೆ ಬನಾರಸಿನಿಂದ ಬಂದೆ...'' ಎಂದವನ ಮಾತುಗಳಲ್ಲಿ ಅಸಂಬದ್ಧತೆ ತುಂಬಿಕೊಂಡಂತೆ ಅನ್ನಿಸಿತ್ತು ಕ್ಷಣ. ''ಕಾಶಿ ವಿಶ್ವನಾಥ, ಗಂಗಾ ಮಾತೆಯರು ಆರೋಗ್ಯವಾಗಿದ್ದಾರಾ?...'' ತಮಾಷೆಯ ಮೂಡ್‌ನಲ್ಲೆ ಕೇಳಿದ್ದೆ. ನಾನು ಸಟೈರ್ ಮಾಡಿದರೂ ಆತ ಒಂದಿಷ್ಟೂ ಬೇಸರ ಮಾಡಿಕೊಂಡಿರಲಿಲ್ಲ. ಬದಲಾಗಿ, ''ದೆ ಆರ್ ಆಲ್ವೇಸ್ ಸ್ಟ್ರಾಂಗ್ ಅಂಡ್ ಫೈತ್‌ಫುಲ್ ಫಾರ್ ದೆಮ್ ಸೆಲ್ವ್ಸ್. ನಾನು ಬನಾರಸಿಗೆ ಏಕೆ ಹೋಗಿದ್ದೆ ಅನ್ನೋದನ್ನ ಆಮೇಲೆ ಹೇಳ್ತೀನಿ. ಯಾಕೆ ನಾನು ಗುರುತಾಗಲಿಲ್ಲವಾ?...'' ನಕ್ಕು ಪ್ರಶ್ನಿಸಿದ್ದ. ಆತನನ್ನು ನಾನು ಯಾವೊತ್ತಾದರೂ, ಎಲ್ಲಿಯಾದರೂ ನೋಡಿರಬಹುದೆ ಎಂದು ಮನಸ್ಸನ್ನು ತಡಕಾಡಿದ್ದೆ. ಉಹೂಂ ಯಾವ ಕುರುಹೂ ಕಂಡಿರಲಿಲ್ಲ ಮನದ ಪರದೆಯ ಮೇಲೆ. ನನ್ನ ಮೌನವನ್ನು ಗಮನಿಸಿ, ''ನಾನು ಡಿಕ್ಯಾಸ್ಟ್ರೊ'' ಎಂದಿದ್ದ. ''ಯಾವ ಡಿಕ್ಯಾಸ್ಟ್ರೊ...'' ಸಡನ್ನಾಗಿ ಕೇಳಿಬಿಟ್ಟಿದ್ದೆ. ''ನಾನು ಡಿಕ್ಯಾಸ್ಟ್ರೊ, ಸತ್ಯ ಡಿಕ್ಯಾಸ್ಟ್ರೊ, ಮೂವತ್ತು ವರ್ಷಕ್ಕೆ ಎಲ್ಲಾ ಮರೆತುಬಿಟ್ರಾ. ಆರು ತಿಂಗಳು ನೀವು ನನ್ನ ಕ್ಲಾಸ್‌ಮೇಟ್ ಆಗಿದ್ರಲ್ಲ. ಹ್ಯಾಂಡ್ ಪೋಸ್ಟಿನಲ್ಲಿದ್ದ ನಮ್ಮ ಕಾಫಿ ತೋಟದ ಮನೆಯಲ್ಲಿ ಇದ್ದಿರಲ್ಲ ನೀವು. ಅಫ್ಕೋರ್ಸ್ ನನಗೂ ನಿಮಗೂ ಅಂಥ ಸ್ನೇಹ, ಸಲುಗೆಯೇನೂ ಇರಲಿಲ್ಲ. ನಿಮ್ಮಮ್ಮ ಮಾತ್ರ ದಿನವೂ ನಮ್ಮ ಮನೆಗೆ ಬರುತ್ತಿದ್ದರು...'' ಅವನ ಮಾತುಗಳನ್ನು ಮಧ್ಯದಲ್ಲೆ ಮುರಿದು, ''ಫೈನ್ ಫೈನ್ ನೆನಪಾಯ್ತು ಈಗ. ಎಡ್ವರ್ಡ್ ಎಸ್ಟೇಟ್ಸ್ ದೊರೆ. ತುಂಬಾ ಬದಲಾಗಿ ಬಿಟ್ಟಿದ್ದೀರಿ. ತುಂಬಾ ಸ್ಮಾರ್ಟ್ ಆಗಿದ್ರಿ ಆಗ. ಗುರುತು ಹಚ್ಚುವುದರಲ್ಲಿ ಮನಸ್ಸು ಎಷ್ಟು ಸ್ಟ್ರಾಂಗಾಗಿದ್ದರೂ, ಗುರುತು ಹಚ್ಚಬೇಕಾದ ದೇಹದ ಪಾತ್ರವೂ ತುಂಬಾ ದೊಡ್ಡದು. ದೇಹ ಇಲ್ಲದೆ ಹೋದರೆ ಗುರುತೂ ಇರುವುದಿಲ್ಲ. ಸಾರಿ, ನಿಮ್ಮ ಎಡ್ವರ್ಡ್ ಎಸ್ಟೇಟ್ಸ್ ಫ್ಯಾಮಿಲಿ ಇಲ್ಲದೆ ಇದ್ದಿದ್ರೆ ನಾನು ಇವೊತ್ತು ಈ ಸೀಟಿನಲ್ಲಿ ಕುಳಿತಿರುತ್ತಿರಲಿಲ್ಲ. ಮನುಷ್ಯ ಕೃತಜ್ಞನಾಗಿರಬೇಕು ಯಾವೊತ್ತಿಗಾದರೂ. ನಿಮ್ಮನ್ನು ನೋಡಿದ ಕ್ಷಣ ಗುರುತಿಸದಿದ್ದಕ್ಕಾಗಿ ಒನ್ಸ್ ಎಗೈನ್ ಐಯ್ಯಾಮ್ ವೆರಿ ಸಾರಿ...'' ಮಾತನಾಡುತ್ತಾ ಎದ್ದು ನಿಂತು ಅವನ ಕೈಕುಲುಕಿದ್ದೆ. ''ಪ್ಲೀಸ್ ಪ್ಲೂರಲ್ ಬೇಡ, ಸಿಂಗ್ಯುಲರ್ ಸಾಕು. ನನ್ನ ಗುರುತು ಹಿಡಿದುಬಿಟ್ಟೆಯಲ್ಲ, ಪ್ಲೂರಲ್ ತೆಗೆದುಹಾಕು. ಸಿಂಗ್ಯುಲರ್‌ನಲ್ಲಿರೋ ಫ್ರೆಂಡ್ಶಿಪ್ ಥಿಕ್ನೆಸ್ ಮತ್ತು ಫಾಂಡ್ನೆಸ್ ಪ್ಲೂರಲ್‌ನಲ್ಲಿರಲ್ಲ. ಇರಲಿ, ಅಮ್ಮ ಹೇಗಿದಾಳೆ. ನಾನು ಹುಡುಗನಾಗಿದ್ದಾಗ ನಿಮ್ಮಮ್ಮನನ್ನು ಅನುಸೂಯಮ್ಮ ಅಂಥ ಸಿಂಗ್ಯುಲರ್‌ನಲ್ಲೆ ಕರೆಯುತ್ತಿದ್ದೆ...'' ನಕ್ಕು ಆತನೂ ಎದ್ದು ನಿಂತುಕೊಂಡಿದ್ದ. ''ಎರಡು ವರ್ಷಗಳ ಹಿಂದೆ ಹೋಗ್ಬಿಟ್ಲು, ಕೋವಿಡ್ ಫಸ್ಟ್ ವೇವ್‌ನಲ್ಲಿ. ಇವೊತ್ತು ನೀನು ಸಿಕ್ಕಿದ್ದು ತುಂಬಾನೆ ಖುಷಿಯಾಗಿದೆ ನನಗೆ. ಅಂದ ಹಾಗೆ ಎಲ್ಲಿ ಉಳ್ಕೊಂಡಿದ್ದೀಯ?'' ಎಂದು ವಿಚಾರಿಸಿಕೊಂಡಿದ್ದೆ. ನಿಜಕ್ಕೂ ನನಗೆ ಡಿಕ್ಯಾಸ್ಟ್ರೊನ ನೋಡಿ ಖುಷಿಯಾಗಿತ್ತು ಅಂತರ್ಯದಲ್ಲೂ... ''ಶ್ರೀ ಆದಿತ್ಯ ಇನ್‌ನಲ್ಲಿ ಉಳ್ಕೊಂಡಿದ್ದೀನಿ. ವಾರದಿಂದ ಕಮ್ಯುನಲ್ ರಯಟ್ಸ್ ಇದೆಯಂತೆ ಇಲ್ಲಿ. ಐಡೆಂಟಿಟಿ ಕಾರ್ಡ್ ಇದ್ರೂ, ಎಡ್ವರ್ಡ್ ಎಸ್ಟೇಟಿನ ಎಂ.ಡಿ ಹೆಸರಿನಲ್ಲಿ ಆಧಾರ್ ಕಾರ್ಡ್ ಇದ್ರೂ ಬಹಳ ಸತಾಯಿಸಿಬಿಟ್ರು ಹೋಟೆಲಿನೋರು. ಕಡೆಗೆ ನೀನು ನನ್ನ ಕ್ಲೋಸ್ ಫ್ರೆಂಡ್ ಎಂದು ಹೇಳಿ ಬೇಕಾದ್ರೆ ಫೋನ್ ಮಾಡಿ ತಿಳ್ಕೊಳಿ ಅಂದೆ. ಕೂಡಲೇ ಅಡ್ಮಿಷನ್ ಮಾಡಿಕೊಂಡ್ರು. ನಾನೇನು ಸುಳ್ಳು ಹೇಳಲಿಲ್ಲ ಅಲ್ವಾ'' ಎಂದವನ ಭುಜ ತಟ್ಟಿ, ''ಎಂಟು ಗಂಟೆಗೆಲ್ಲ ಹೋಟೆಲ್ ಖಾಲಿ ಮಾಡಿಕೊಂಡು ನಮ್ಮ ಪೊಲೀಸ್ ಗೆಸ್ಟ್ ಹೌಸ್‌ಗೆ ಬಂದು ಬಿಡು. ನಮ್ಮ ವೆಹಿಕಲ್ ಜೊತೆ ಎಸ್.ಐ ಒಬ್ರು ಬರ್ತಾರೆ. ನಾನು ಸಣ್ಣ ರೌಂಡ್ ಹಾಕಿಕೊಂಡು ಎಂಟೂವರೆಗೆ ಗೆಸ್ಟ್ ಹೌಸ್‌ಗೆ ಬಂದು ಸೇರ್ಕೊತೀನಿ. ಜೊತೆಯಲ್ಲಿ ಒಂದಿಷ್ಟು ಗ್ಲೆನ್ಫಿಡಿಚ್ ಜೊತೆಯಾಗಿ ಮಾತನಾಡುತ್ತಾ ಊಟ ಮಾಡೋಣ. ನೀನು ಹೈಸ್ಕೂಲಿನಲ್ಲಿದ್ದಾಗ್ಲೆ ಡ್ರಿಂಕ್ಸ್ ತಗೊತೀಯ ಅನ್ನೊ ಸುದ್ದಿ ಇತ್ತು. ಎನಿವೇಸ್ ಐಯ್ಯಾಮ್ ವೆರಿ ಗ್ಲಾಡ್ ಟುಡೆ...'' ಎಂದು ಅವನ ಭಾರವನ್ನು ಎಸ್.ಐ. ಒಬ್ಬರ ಹೆಗಲಿಗೇರಿಸಿ ಕಾರು ಹತ್ತಿದ್ದೆ.

ಎಂಟೂವರೆಗೆ ಗೆಸ್ಟ್ ಹೌಸ್ ಪ್ರವೇಶಿಸಿದಾಗ ಅವನು ಫ್ರೆಶ್ ಆಗಿ ಸಿಗರೇಟು ಸೇದುತ್ತಿದ್ದ. ಘಮ್ಮನೆಯ